


# ದಾಖಲೆ ಧ್ವಜ



ಚಿತ್ರ ನೋಡಿ 'ಇದೇನು ಭಾರತದ ಧ್ವಜ ಹೀಗೆ' ಅಂದುಕೊಳ್ಳಬೇಡಿ. ಇದು ಬೃಹತ್ ಮಾನವ ಧ್ವಜ. ಇತ್ತೀಚೆಗೆ ಚೆನ್ನೈನ ನಂದನಮ್‌ನ ಕ್ರೀಡಾಂಗಣವೊಂದರಲ್ಲಿ ನ್ಯೂಸ್ 7 ತಮಿಳು ಮತ್ತು ರೋಟರಿ ಇಂಟರ್‌ನ್ಯಾಷನಲ್ ಸಂಸ್ಥೆ ಜಂಟಿಯಾಗಿ ಈ ಬೃಹತ್ ಮಾನವ ಧ್ವಜ ನಿರ್ಮಿಸಿ ಗಿನ್ನೆಸ್ ದಾಖಲೆ ಮಾಡಿದವು.

ಬೆಳಗ್ಗಿನ ಜಾವ ಕ್ರೀಡಾಂಗಣಕ್ಕೆ ಲಗ್ಗೆ ಇಟ್ಟ ಉತ್ಸಾಹಿ ಜನರು, ಆಯೋಜಕರ ಸೂಚನೆಯಂತೆ ನಿಂತು ಈ ದಾಖಲೆ ನಿರ್ಮಿಸಲು ಸಹಕರಿಸಿದರು. ಅಂದ ಹಾಗೆ ಈ ದಾಖಲೆಯಲ್ಲಿ ಪಾಲ್ಗೊಂಡ ಜನರ ಸಂಖ್ಯೆ ಬರೋಬ್ಬರಿ 43,830. ಸ್ಥಳದಲ್ಲಿ ಹಾಜರಿದ್ದ ಗಿನ್ನೆಸ್ ಸಂಸ್ಥೆಯ ಅಧಿಕಾರಿಗಳು ಎಲ್ಲವನ್ನೂ ಪ್ರಮಾಣಿಸಿ ಇದೊಂದು ವಿಶ್ವ ದಾಖಲೆ ಎಂದು ಪ್ರಮಾಣ ಪತ್ರ ನೀಡಿದರು.

'ಕೀಪ್ ಇಂಡಿಯಾ ಪೋಲಿಯೊ ಫ್ರೀ' ಎಂಬ ಘೋಷಣೆಯೊಂದಿಗೆ ಈ ಅಭಿಯಾನ ಕೈಗೊಳ್ಳಲಾಗಿತ್ತು. ಯುವಜನತೆಯಲ್ಲಿ ರಾಷ್ಟ್ರಾಭಿಮಾನ ಮೂಡಿಸುವ ಉದ್ದೇಶದಿಂದ ಸಂಘಟಕರು ಈ ಕಾರ್ಯಕ್ರಮ ಆಯೋಜಿಸಿದ್ದರು.

ಈ ಹಿಂದೆ ಪಾಕಿಸ್ತಾನದ ಲಾಹೋರ್ ಸ್ಪೋರ್ಟ್ಸ್ ಕ್ಲಬ್ 29,000 ಜನರನ್ನು ಸೇರಿಸಿ ಬೃಹತ್ ಮಾನವ ಧ್ವಜ ನಿರ್ಮಿಸಿ ದಾಖಲೆ ನಿರ್ಮಿಸಿತ್ತು. ಇದೀಗ ಭಾರತ ಈ ದಾಖಲೆ ಮುರಿದು ಹೊಸ ದಾಖಲೆಯನ್ನು ತನ್ನ ಹೆಸರಿಗೆ ಬರೆದುಕೊಂಡಿದೆ. ಈ ದಾಖಲೆ ನಿರ್ಮಿಸಲು ಕಾರಣಕರ್ತರಾದ ಎಲ್ಲರಿಗೂ ಒಂದು ಶಹಬ್ಬಾಸ್ ಹೇಳಲೇಬೇಕು.

■ ಐ.ಜಿ. ಕರಾಯ

